ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 100-108
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ದುರಂತದ ಆಗರಕ್ಕೆ ಸಿಲುಕಿದವರು

**ಡಾ.ರಾಶಿ.ಎಂ.ಆರ್**
ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ-ಕನ್ನಡ ವಿಭಾಗ, ಶ್ರೀ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು.

***Abstract:***
*ಕನ್ನಡ ಸಾಹಿತ್ಯದ ಕಾದಂಬರಿ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿ ಸೃಜನಶೀಲ ಮತ್ತು ಸೃಜನೇತರ ಸಾಹಿತ್ಯ ಪ್ರಕಾರಗಳಲ್ಲಿ ಮಹತ್ವದ ಕೃತಿಗಳನ್ನು ನೀಡಿದ ರಾಷ್ಟ್ರಕವಿ ಕುವೆಂಪು ಅವರ ಹೆಸರು ಕನ್ನಡ ಸಾಹಿತ್ಯದಲ್ಲಿ ಅಜರಾಮರ. ಕುವೆಂಪು ತಮ್ಮ ಮೊದಲ ಕಾದಂಬರಿಯ ರಚನೆಯಲ್ಲಿ ನೂತನ ರಹದಾರಿಯನ್ನು ತೆರೆದು ತೋರಿದವರು. ಕಾದಂಬರಿ ಕ್ಷೇತ್ರದಲ್ಲಿ ರಚಿಸಿದ ಸಂಖ್ಯೆ ಅಲ್ಪದ್ದಾದರೂ, ಮೈಲಿಗಲ್ಲನ್ನು ಸ್ಥಾಪಿಸಿದವರು. ಕಾನೂರು ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು ಎಂಬ ಎರಡು ಕಾದಂಬರಿಗಳನ್ನು ಬರೆಯುವ ಮೂಲಕ ಹೊಸ ಮಾರ್ಗವನ್ನು ಸೃಷ್ಟಿಸಿ ಇತರರಿಗೆ ಮಾದರಿಯಾದವರು. ಈ ಲೇಖನದಲ್ಲಿ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಬರುವ ದುರಂತದ ಆಗರದಲ್ಲಿ ಮುಳುಗಿ ಪಶ್ಚಾತ್ತಾಪಗೊಂಡ ಒಂದೇ ಕುಟುಂಬದ ಮೂರು ಪಾತ್ರಗಳನ್ನು ವಿಮರ್ಶೆಗೆ ಒಳಗು ಮಾಡಲಾಗಿದೆ.*

***Keywords:*** *ಕನ್ನಡ ಕಾದಂಬರಿ, ಕುವೆಂಪು, ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು.*

## ಪೀಠಿಕೆ

ಕನ್ನಡ ಸಾಹಿತ್ಯದ ಕ್ಷೇತ್ರದಲ್ಲಿ ಕುವೆಂಪು ಅವರ ಕಾನೂರು ಹೆಗ್ಗಡಿತಿ ಪ್ರಮುಖ ಕಾದಂಬರಿಯಾಗಿದೆ. 591 ಬೃಹತ್ ಪುಟಗಳುಳ್ಳ ಈ ಕಾದಂಬರಿಯಲ್ಲಿ ಒಟ್ಟು 81 ಅಧ್ಯಾಯಗಳಿವೆ. ಪ್ರಧಾನವಾಗಿ ಐದು ಕುಟುಂಬಗಳ ಜೀವನ ಕ್ರಮದ ವಿವರವನ್ನು ವಿಸ್ತೃತವಾಗಿ ತಿಳಿಸಲಾಗಿದೆ. ಕುಟುಂಬಗಳ ಏಳುಬೀಳಿನ ಚಿತ್ರಣವನ್ನು ಮನೋಜ್ಞವಾಗಿ ನಿರ್ಮಿಸಲಾಗಿದೆ. ಈ ಕಾದಂಬರಿಯಲ್ಲಿ ಪ್ರಧಾನವಾಗಿ ಒಂದೇ ಕುಟುಂಬದಲ್ಲಿ ಬರುವ ಮೂರು ಪಾತ್ರಗಳು ದುರಂತದ ಆಗರದಲ್ಲಿ ಮುಳುಗುವಂಥಹದನ್ನ ಕಾಣಬಹುದಾಗಿದೆ. ಯಾರು ಮುಖ್ಯರಲ್ಲ ಯಾರು ಅಮುಖ್ಯರಲ್ಲ ಎಂದು ಕುವೆಂಪು ತಮ್ಮ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಬರುವ ಎಲ್ಲಾ ಪಾತ್ರಗಳು ಪ್ರಧಾನವೇ. ಆದರೆ ದುರಂತದ ಆಗರದಲ್ಲಿ ಮುಳುಗಿ ಪಶ್ಚಾತ್ತಾಪಗೊಂಡ ಒಂದೇ ಕುಟುಂಬದ ಮೂರು ಪಾತ್ರಗಳನ್ನು ಈ ಲೇಖನದಲ್ಲಿ ವಿಮರ್ಶೆಗೆ ಒಳಗು ಮಾಡಲಾಗಿದೆ.

ಕಾದಂಬರಿಯಲ್ಲಿ ಬರುವ ಮನುಷ್ಯ ಮತ್ತು ಪ್ರಾಣಿ ಸಂಕುಲಗಳೆರಡು ಮುಖ್ಯವಾಗಿವೆ. ಕಾದಂಬರಿಯ ಮಧ್ಯಭಾಗದಲ್ಲಿ ಅಣ್ಣಯ್ಯ ಗೌಡ, ಅವರ ಹೆಂಡತಿ, ಲಿಂಗ, ಕೃಷ್ಣಯ್ಯ ಶೆಟ್ಟಿ, ಕೃಷ್ಣಪ್ಪ, ನಾಗಮ್ಮ (ಟೈಗರ್ ನಾಯಿ, ಬೇಟೆಯಾಡಿದ ಹಂದಿ)ಮುಂತಾದ ಪಾತ್ರಗಳು ಅಂತ್ಯಗೊಳ್ಳುತ್ತವೆ(ಸಾವನ್ನಪ್ಪುತ್ತವೆ). ದುರಂತಕ್ಕೀಡಾದ

***Please cite this article as:*** ರಾಶಿ.ಎಂ.ಆರ್. (2023). ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ದುರಂತದ ಆಗರಕ್ಕೆ ಸಿಲುಕಿದವರು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(5), 100–108.

ಮೇಲಿನ ಪಾತ್ರಗಳು ಬೇರೆ ಬೇರೆ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಈ ಸಂಬಂಧ ಕಾನೂರಿನ ಕುಟುಂಬದಲ್ಲಿ ಜರುಗುವ ದುರಂತತೆಯ ತೀವ್ರತೆ ಬೇರೆ ಯಾವ ಕುಟುಂಬದಲ್ಲಿ ಸಾಲು ಸಾಲಾಗಿ ನಿರೂಪಿತವಾಗಿಲ್ಲ. ಕಾನೂರಿನ ಮನೆಯ ಚಂದ್ರಯ್ಯ ಗೌಡ, ನಾಗಮ್ಮ, ಸುಬ್ಬಮ್ಮ, ರಾಮಯ್ಯ–ಈ ನಾಲ್ಕು ಪಾತ್ರಗಳು ಕಾದಂಬರಿಯ ಕೊನೆಯ ಭಾಗದವರೆಗೂ ಸಾಗದೇ ಅಂತ್ಯ ಕಾಣುತ್ತವೆ. ನಾಗಮ್ಮ ಮತ್ತು ಚಂದ್ರಯ್ಯ ಗೌಡ ಪಾತ್ರಗಳು ಸಹಜವಾಗಿ ಸಾವಿಗೀಡಾದರೆ, ರಾಮಯ್ಯ ಮತ್ತು ಸುಬ್ಬಮ್ಮ ಎಂಬ ಇನ್ನೆರಡು ಪಾತ್ರಗಳು ದುರಂತ ಅಂತ್ಯ ಕಾಣುತ್ತವೆ.

**ಚಂದ್ರಯ್ಯ ಗೌಡ**

ಈತ ಕಾನೂರಿನ ಅವಿಭಕ್ತ ಕುಟುಂಬದ ಯಜಮಾನ. ಕೂಡು ಕುಟುಂಬದ ಒಡೆಯನಾಗಿದ್ದ ಚಂದ್ರಯ್ಯ ಗೌಡ ತನ್ನ ಆರ್ಥಿಕ ಶಕ್ತಿಯಿಂದ, ಅಧಿಕಾರದ ಬಲದಿಂದ ಮೂರು ವಿವಾಹಗಳನ್ನು ಮಾಡಿಕೊಳ್ಳುತ್ತಾನೆ. ಮೊದಲ ಮತ್ತು ಎರಡನೆಯ ಹೆಂಡತಿ ತೀರಿಕೊಂಡ ಅನಂತರ ಮೂರನೇ ಹೆಂಡತಿಯಾಗಿ ನೆಲ್ಲೂರಿನ ಪೆದ್ದೇಗೌಡರ ಮಗಳು ಸುಬ್ಬಮ್ಮಳನ್ನು ವರಿಸುತ್ತಾನೆ. ಕಾನೂರಿನ ಕುಟುಂಬದಲ್ಲಿ ಅಣ್ಣನಾದ ಸುಬ್ಬಯ್ಯನ ಹೆಂಡತಿ ನಾಗಮ್ಮ ಮತ್ತು ಮಗ ಹೂವಯ್ಯ ತನ್ನ ಮೊದಲ ಹೆಂಡತಿಯ ಮಗ ರಾಮಯ್ಯ, ಎರಡನೇ ಹೆಂಡತಿ ಮಕ್ಕಳಾದ ಪುಟ್ಟಮ್ಮ ಮತ್ತು ವಾಸು ಎಲ್ಲರೂ ಒಟ್ಟಿಗೆ ವಾಸಿಸುತ್ತಿರುತ್ತಾರೆ. ಅಣ್ಣನ ನಿಧನದ ಅನಂತರ ಮನೆಯನ್ನ ಮುನ್ನಡೆಸುವ ಜವಾಬ್ದಾರಿ ಚಂದ್ರಯ್ಯ ಗೌಡರ ಪಾಲಿಗೆ ಬರುತ್ತದೆ. ಸಮರ್ಥವಾಗಿ ಕುಟುಂಬವನ್ನು ನಿರ್ವಹಿಸುವ ಬದಲು ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಾರೆ. ಅಲ್ಲದೇ ಮಕ್ಕಳ ಶಿಕ್ಷಣವನ್ನ ನಿಲ್ಲಿಸಲು ಮುಂದಾಗುತ್ತಾನೆ. ಈತ ಅಧಿಕಾರದ ಮದದಿಂದ ಮನೆಯವರನ್ನೆಲ್ಲಾ ತನ್ನ ಕಪಿಮುಷ್ಠಿಯಲ್ಲಿ ಇಟ್ಟುಕೊಂಡಿದ್ದ. ತನ್ನ ಮಕ್ಕಳಿಗೆ ಮದುವೆ ವಯಸ್ಸಾಗಿದ್ದರೂ ತನಗಾಗಿ ನವ ವಧುವನ್ನು ಆರಿಸಿ ತಂದಿದ್ದ. ಆದ್ದರಿಂದ ಆತನ ಅಹಂಕಾರ ಹಲವು ಬಾರಿ ಮೇರೆ ಮೀರುತ್ತಿತ್ತು.

ಮಕ್ಕಳಿಗೂ ತಿಳಿಯದಂತೆ ನೆಲ್ಲೂರಿನ ಸುಬ್ಬಿಯನ್ನು ವಿವಾಹವಾಗಿದ್ದನು. ಚಂದ್ರಯ್ಯ ಗೌಡರು ಬಾಹ್ಯವಾಗಿ ದರ್ಪ ತೋರಿದರೂ ಅಂತರಂಗದಲ್ಲಿ ಸುಬ್ಬಮ್ಮಳ ಕೈಗೊಂಬೆಯಾಗಿದ್ದರು. ಕಾರಣ ತನಗಿಂತ ಚಿಕ್ಕವಳಾದ ಲಾವಣ್ಯವತಿಯನ್ನು ವರಿಸಿದ್ದು. ಯಜಮಾನ್ಯದ ನೆಲೆಯಲ್ಲಿ ಹಲವು ಸಂದರ್ಭಗಳಲ್ಲಿ ತನ್ನ ಒಕ್ಕಲು ಮತ್ತು ಜೀತದಾಳುಗಳ ಕುಟುಂಬದ ಮೇಲೆ, ಸಾಕು ಪ್ರಾಣಿಗಳ ಮೇಲೆ ತನ್ನ ರೌದ್ರಾವತಾರವನ್ನು ಚಂದ್ರಯ್ಯ ಗೌಡರು ತೋರುತಿದ್ದರು. ತನ್ನ ಅತ್ತಿಗೆ ನಾಗಮ್ಮರ ಜೊತೆ ಒಂದಲ್ಲ ಒಂದು ವಿಷಯಕ್ಕೆ ಜಗಳವಾಡುತ್ತಿದ್ದರು. ಅಲ್ಲದೇ ಸದಾ ಕುಟುಂಬದ ವಿಘಟನೆಯ ಕಡೆಗೆ ಆಲೋಚಿಸುತ್ತಿದ್ದರು. ಮೊದಲ ಹೆಂಡತಿ ತೀರಿಕೊಂಡಾಗ ಆತ್ಮಹತ್ಯೆಗೆ ಮುಂದಾದ ಚಂದ್ರಯ್ಯ ಗೌಡರ ನಡುವಳಿಕೆಯಲ್ಲಿ ಬರು ಬರುತ್ತಾ ತೀವ್ರತರವಾದ ಬದಲಾವಣೆ ಕಂಡಿತು. ಈ ಮಧ್ಯೆ ಚಂದ್ರಯ್ಯ ಗೌಡರು ದಕ್ಷಿಣ ಕನ್ನಡ ಜಿಲ್ಲೆಯ ಕಡೆಯಿಂದ ಜೀತದಾಳಾಗಿ ಬಂದ ಗಂಗೆಯ ಸಾನಿಧ್ಯ ಬಯಸಿ ಅಪವಾದಕ್ಕೂ ಗುರಿಯಾಗಿದ್ದರು. ಮೂರನೇ ವಿವಾಹದಿಂದ ಚಂದ್ರಯ್ಯ ಗೌಡರನ್ನ ವಿಮುಖರಾಗಿಸಲು ಸಂಬಂಧಿಕರು ಅನೇಕ ಬಾರಿ ಪ್ರಯತ್ನಿಸಿದ್ದರು. ಗೌಡರ ತೃತೀಯ ವಿವಾಹದ ವಿಚಾರದಲ್ಲಿ ಅವರಲ್ಲಿ ಸಂಪೂರ್ಣ ಅಂಧಕಾರವಿತ್ತು ಎನ್ನುತ್ತಾರೆ ನಿರೂಪಕರು. ಸುಬ್ಬಮ್ಮಳ ಚಾಡಿಯ ಮಾತನ್ನು ಕೇಳಿ ಮನೆಯ ಸದಸ್ಯರ ಮೇಲೆ ಕಠೋರವಾಗಿ ನಡೆದುಕೊಳ್ಳುತ್ತಿದ್ದರು. ಸುಬ್ಬಮ್ಮಳ ಮನವೊಲಿಕೆಗಾಗಿ ತನ್ನ ಮಿತಿಗಳನ್ನು ಮುಚ್ಚುವಂತೆ ಒಂದಷ್ಟು ತಂತ್ರಗಳನ್ನ ಹುಡುಕುತ್ತಿದ್ದನು. "ಚಂದ್ರಯ್ಯ ಗೌಡರು ತಮ್ಮ ಹದಿನೆಂಟು ವರ್ಷದ ಪುಟ್ಟ ಹೆಂಡತಿಗೆ ಶರಣಾದುದರಲ್ಲಿ ಒಂದು ರಹಸ್ಯವಿತ್ತು. ಹೆಚ್ಚು ವಯಸ್ಸಾಗಿದುದರಿಂದ ಚಿಕ್ಕ ವಯಸ್ಸಿನ ಹುಡುಗಿಗೆ ತಾನು ತಕ್ಕ ವರನಲ್ಲ ಎಂಬುದು ಅವರಿಗೆ ತಿಳಿಯದೆ ಇರಲಿಲ್ಲ. ಸೌಂದರ್ಯ ಯೌವ್ವನ ಸರಸ

ಇವುಗಳಿಂದ ತರುಣಿಯನ್ನ ವಶ ಮಾಡಿಕೊಳ್ಳುವ ಸುಯೋಗವು ತಮ್ಮದಾಗಿರಲಿಲ್ಲವಾದುದರಿಂದ ಚಾಡಿಯ ಮಾತು ಕೇಳುವುದು ಅವಳನ್ನು ಅನಾಗರಿಕವಾಗಿ ವರ್ತಿಸಲು ಬಿಡುವುದು ವಸನ ಭೂಷಣಗಳನ್ನ ಮೇಲ್ವಾಯ್ದು ತಂದು ಕೊಡುವುದು ಇವೆ ಮೊದಲಾದ ಹಿನೋಪಾಯಗಳಿಂದ ತಮ್ಮ ಕಡೆಗೆ ಒಲಿಸಿಕೊಳ್ಳಲು ಸಾಹಸ ಮಾಡುತ್ತಿದ್ದರು"[1]

ಶ್ರೀಮಂತನಾದ ಚಂದ್ರಯ್ಯ ಗೌಡ ಕಾನೂರಿನ ವೆಂಕಪ್ಪ ಜೋಯಿಸರ ಮಾತನ್ನು ಎಂದಿಗೂ ಮೀರುತ್ತಿರಲಿಲ್ಲ. ಅದು ಮಕ್ಕಳ ಓದಿನ ವಿಷಯದಲ್ಲಿಯೂ ಕೂಡ. ಆರ್ಥಿಕವಾಗಿ ಸಬಲನಾಗಿದ್ದ ಚಂದ್ರಯ್ಯ ಗೌಡನಿಂದ ಜೋಯಿಸರು ದೈವ ಅಥವಾ ದೇವರ ಹೆಸರಿನಲ್ಲಿ ಕಾಣಿಕೆ ವಸೂಲು ಮಾಡುತ್ತಿದ್ದರು ಇದನ್ನು ತಿಳಿದು ಹೂವಯ್ಯ ವಿರೋಧಿಸಿದರೆ ಆತನ ವಿರುದ್ಧವೇ ಚಂದ್ರಯ್ಯ ಗೌಡರನ್ನು ಜೋಯಿಸರು ಎತ್ತಿ ಕಟ್ಟುತ್ತಿದ್ದರು. ಇದೊಂದೇ ಸಂದರ್ಭದಲ್ಲಿ ಅಲ್ಲದೇ ಇನ್ನಿತರ ಸಂದರ್ಭದಲ್ಲಿಯೂ ಹೂವಯ್ಯನ ವಿಚಾರಧಾರೆಗಳನ್ನು ಒಪ್ಪಿಕೊಳ್ಳದೆ ಕಲಹಕ್ಕಿಳಿಯುತ್ತಿದ್ದರು. ಒಮ್ಮೆ ಒಕ್ಕಲಾದ ಅಣ್ಣಯ್ಯ ಗೌಡರು ಚಂದ್ರಯ್ಯ ಗೌಡರ ಬಳಿ ಈ ಹಿಂದೆ ಸಾಲ ಮಾಡಿದ್ದರೂ, ಪುನಃ ಸಾಲ ಕೇಳಲು ಬರುತ್ತಾರೆ. ಅಣ್ಣಯ್ಯ ಗೌಡರು ಸಾಲದ ಸುಳಿಯಲ್ಲಿ ಇರುವುದರಿಂದ ಚಂದ್ರಯ್ಯ ಗೌಡ ಹಣ ಕೊಡಲು ನಿರಾಕರಿಸುತ್ತಾನೆ. ಅವರೆಲ್ಲರೂ ಮಾತುಕತೆ ಆಡುತ್ತಿರುವ ಸಂದರ್ಭದಲ್ಲಿ ನಾಗಮ್ಮ, ಪುಟ್ಟಮ್ಮ, ಸುಬ್ಬಮ್ಮರ ನಡುವೆ ಜಗಳ ತಾರಕಕ್ಕೇರುತ್ತದೆ. ಎಲ್ಲರ ಸಮ್ಮುಖದಲ್ಲಿ ಮನೆಯ ಕಲಹ ಬಹಿರಂಗವಾಗುತ್ತದೆ. ಕೋಪಗೊಂಡ ಚಂದ್ರಯ್ಯ ಗೌಡರು ಊಟದ ನೆಪದಲ್ಲಿ ಸಬೂಬು ಹೇಳುತ್ತಾ ಸುಬ್ಬಮ್ಮಳನ್ನ ಹೊಡೆಯುತ್ತಾರೆ. ಮನೆಯ ಮಾನ ಬೇರೆಯವರ ಮುಂದೆಹರಾಜಾಗಿದ್ದುಅವರಿಗೆ ಸಹಿಸಲಸಾಧ್ಯವಾಗಿತ್ತು. ಇದಕ್ಕೆ ಇನ್ನೊಂದು ಗೌಪ್ಯ ಕಾರಣವೂ ಇತ್ತು. ಸೇರೆಗಾರ ರಂಗಪ್ಪ ಶೆಟ್ಟಿಯ ಬಲೆಗೆ ಸುಬ್ಬಮ್ಮ ಸಿಲುಕಿರಬಹುದೆಂಬ ಅನುಮಾನ ಅವರ ಮನದ ಮೂಲೆಯಲ್ಲಿ ಒರಗಿತ್ತು. ಆಗಾಗ ಅದರ ನೆವದಿಂದ ಕ್ರೂರವಾಗಿ ವರ್ತಿಸುತ್ತಿದ್ದರು. ಆದರೆ ಸುಬ್ಬಮ್ಮ ವಾಸ್ತವವಾಗಿ ಆ ದಾರಿ ಹಿಡಿದಿರಲಿಲ್ಲವೆಂಬುದು ವಿಧಿತ ವಿಚಾರ.

ಹೂವಯ್ಯನ ಜೊತೆ ಸೇರಿ ತನ್ನ ಮಗ ರಾಮಯ್ಯನು ಹಾಗೆ ಮುಂದುವರೆದರೆ ಎಂದು ಆಲೋಚಿಸಿ ಕಾರ್ಯ ಪ್ರವೃತ್ತರಾದರು. ಹೂವಯ್ಯನ ವ್ಯಕ್ತಿತ್ವವನ್ನು ಆರೋಪಿಸಿ ರಾಮಯ್ಯನನ್ನು ತನ್ನತ್ತ ಆಕರ್ಷಿಸಲು ಪ್ರಯತ್ನಿಸಿ ಮುಂದೆ ಸಫಲರಾಗುವರು. ಚಂದ್ರಯ್ಯ ಗೌಡರು ನಾಗಮ್ಮ ಮತ್ತು ಹೂವಯ್ಯರನ್ನು ಬೇರೆಯಿಟ್ಟು ತನ್ನ ಹಿತ ಸಾಧಿಸಿಕೊಳ್ಳಲು ಯೋಚಿಸಿದರು. ಅಂತೆಯೇ ಕಾನೂರಿನ ಆಸ್ತಿಪಾಲು ಮಾಡಲು ಮುಂದಾದರು. ಅಲ್ಲದೇ ಫಲವತ್ತಾದ ಜಾಗವನ್ನು ಸ್ವಂತದೆಂದು ತಮ್ಮ ಬಳಿಯಲ್ಲಿಯೇ ಇಟ್ಟುಕೊಳ್ಳುತ್ತಾರೆ. ಪಿತ್ರಾರ್ಜಿತ ಆಸ್ತಿಯಲ್ಲಿ ಲಾಭದಾಯಕವಲ್ಲದ ಆಸ್ತಿ ಹೂವಯ್ಯನ ಪಾಲಾಗುತ್ತದೆ. ಮನೆ ಆಸ್ತಿ ಪಾಲಾದ ಅನಂತರ ಚಂದ್ರಯ್ಯ ಗೌಡರ ದರ್ಪ ಅಹಂಕಾರ ಮುಂದುವರೆಯುತ್ತದೆ. ಸಣ್ಣತನ ಅಪಾರವಾಗಿ ಮೈ ತುಂಬುತ್ತದೆ. ಹೂವಯ್ಯನ ಮನೆಗೆ ವಾಸು ಪುಟ್ಟಮ್ಮ ಹೋಗದಂತೆ ತಾಕೀತು ಮಾಡುತ್ತಾರೆ. ಇದರಿಂದ ಬೇಸರಗೊಂಡ ಹೂವಯ್ಯ ಕೆಳ ಕಾನೂರಿನ ತನ್ನ ಪಾಲಿಗೆ ಬಂದ ಅಣ್ಣಯ್ಯ ಗೌಡರ ಮನೆಗೆ ತೆರಳುತ್ತಾನೆ. ಒಮ್ಮೆ ಚಂದ್ರಯ್ಯ ಗೌಡರು ಹೆಂಡತಿ ಸುಬ್ಬಮ್ಮಳನ್ನ ಬಂದೂಕಿನಿಂದ ಕೊಲ್ಲಲು ಹೋಗುತ್ತಾರೆ. ತಪ್ಪಿಸಿಕೊಂಡ ಸುಬ್ಬಮ್ಮ ತನ್ನ ತವರಿನ ಆಶ್ರಯ ಪಡೆಯುತ್ತಾಳೆ. ಹೆಂಡತಿಯಿಂದ ದೂರಾದ ಚಂದ್ರಯ್ಯ ಗೌಡರ ವರ್ತನೆಯಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಹಲವು ದಿನಗಳು ಕಳೆದ ಬಳಿಕ ಹೆಗ್ಗಡಿತಿಯ ಜಾಗವನ್ನು ಜೀತದಾಳು ಗಂಗೆ ಆಕ್ರಮಿಸುತ್ತಾಳೆ. ಚಂದ್ರಯ್ಯ ಗೌಡರು ಧರ್ಮಸ್ಥಳಕ್ಕೆ ಹೋಗಿರುವಾಗ ಸೇರೆಗಾರ ರಂಗಪ್ಪ ಸೆಟ್ಟಿ ಮತ್ತು ಗಂಗೆ ಒಟ್ಟಾಗಿ

[1] ಕುವೆಂಪು. (2009). *ಕಾನೂರು ಹೆಗ್ಗಡಿತಿ.* ಪು.ಸಂ.37

ಕಾನೂರಿನ ಮನೆಯನ್ನು ಧೂಳಿಪಟ ಮಾಡುತ್ತಾರೆ. ಮುಂದೆ ಚಂದ್ರಯ್ಯ ಗೌಡರ ಆರೋಗ್ಯ ಕೆಟ್ಟಾಗ ಸುಬ್ಬಮ್ಮಳನ್ನ ಬರುವಂತೆ ಹೇಳಿ ಕಳುಹಿಸುತ್ತಾರೆ. ಗಂಡನ ಹಿಂಸೆಯನ್ನು ತಡೆಯಲಾರದೆ ತಂದೆಯ ಮನೆಗೆ ತೆರಳಿದ್ದ ಸುಬ್ಬಮ್ಮ, ಅನಾರೋಗ್ಯವೆಂದು ತಿಳಿದ ತಕ್ಷಣ ಗಂಡನ ಮನೆಗೆ ಪುನಃ ಮರಳಿ ಬರುತ್ತಾಳೆ.

ಈ ಮುನ್ನ ಸೇರೆಗಾರ ರಂಗಪ್ಪ ಸೆಟ್ಟಿಯ ಸಂಚಿನಿಂದ ತನ್ನ ತಾಯಿಯೊಡನೆ ಚಂದ್ರಯ್ಯ ಗೌಡರ ಮನೆಗೆ ಬಂದಿರುತ್ತಾಳೆ. ಗಂಡನಿಂದ ತಿರಸ್ಕೃತಗೊಂಡು ಮತ್ತೆ ತವರನ್ನು ಸೇರುತ್ತಾಳೆ, ರೋಗ ಉಲ್ಬಣಗೊಂಡು ಚಂದ್ರಯ್ಯ ಗೌಡರು ಮರಣ ಹೊಂದುತ್ತಾರೆ. ಒಂದು ಕಾಲಕ್ಕೆ ದರ್ಪ, ಅಧಿಕಾರ, ಸ್ವಾರ್ಥದ ಹಂಗಿನಿಂದ ಕುರುಡಾಗಿದ್ದ ಚಂದ್ರಯ್ಯ ಗೌಡರು ತಮ್ಮ ಕೊನೆಯ ದಿನಗಳಲ್ಲಿ ಮೃದು ಸ್ವಭಾವಕ್ಕೆ ತಿರುಗುತ್ತಾರೆ. ಚಿಕ್ಕ ಮಗು ತಾಯಿಯನ್ನು ಹೇಗೆ ಬಿಡಲೊಲ್ಲದೋ ಹಾಗೆ ಚಂದ್ರಯ್ಯ ಗೌಡರು ಸುಬ್ಬಮ್ಮಳನ್ನು ಆಶ್ರಯಿಸುತ್ತಾರೆ. ಪಶ್ಚಾತ್ತಾಪದ ಬೇಗುದಿಯಿಂದ ಚಂದ್ರಯ್ಯ ಗೌಡರ ದೇಹ ಕೃಶವಾದಂತೆ ಕಾಣುತ್ತಿರುತ್ತದೆ. ಹೂವಯ್ಯ ಚಂದ್ರಯ್ಯ ಗೌಡರನ್ನು ನೋಡಲು ಬಂದಾಗಿನ ಒಂದು ಸಂದರ್ಭ ಅದನ್ನು ಶ್ರುತಪಡಿಸುತ್ತದೆ. ಈವರೆಗೆ ಚಂದ್ರಯ್ಯ ಗೌಡರ ಮೇಲಿದ್ದ ಓದುಗರ ಭಾವನೆಯನ್ನು ಬದಲಾಯಿಸುತ್ತದೆ. "ನಿರ್ಭಾವವಾಗಿದ್ದ ರೋಗಿಯ ಕಣ್ಣುಗಳಲ್ಲಿ ತಟಕ್ಕನೆ ಭಾವ ಸಂಚಾರವಾಯಿತು ಚಂದ್ರಯ್ಯ ಗೌಡರು ಹೂವಯ್ಯನನ್ನು ಎವೆಯಿಕ್ಕದೆ ನೋಡ ತೊಡಗಿದರು. ಅವರದೆ ಮೇಲಕ್ಕೂ ಕೆಳಕ್ಕೂ ಏರಿಳಿಯುತ್ತಿತ್ತು. ಮೊದಲು ನಿಶಬ್ದವಾಗಿದ್ದ ಉಸಿರಾಟ ಈಗ ಕೇಳಿಸತೊಡಗಿತ್ತು ಹೂವಯ್ಯ ನೋಡುತ್ತಿದ್ದ ಹಾಗೆಯೇ ಸ್ವಲ್ಪ ಕಾಲಕ್ಕೆ ಮೊದಲು ಸತ್ತ ಹಾಗಿದ್ದ ಆ ಕಣ್ಣುಗಳಿಂದ ಜೀವ ಪೂರ್ಣವಾದ ಬೆಚ್ಚನೆಯ ಕಣ್ಣೀರು ಬಳಬಳನೇ ಸೋರತೊಡಗಿ ಹೊದೆಯಾಗಿ ಬೆಳೆದಿದ್ದ ಗಡ್ಡ ಮೀಸೆಗಳಲ್ಲಿ ಹೀರಿ ಹೋಗತೊಡಗಿತು. ಏನನ್ನೊ ಮಾತನಾಡಲು ಪ್ರಯತ್ನಿಸಿದರು: ಆಗಲಿಲ್ಲ. ಕಡೆಗೆ ಎಲುಬು ಚರ್ಮ ಮಾತ್ರವಾಗಿದ್ದ ತಮ್ಮ ಬಲಗೈಯನ್ನು ಹೂವಯ್ಯನ ಕಡೆಗೆ ಪ್ರೀತಿಯ ದುಃಖದ ಪಶ್ಚಾತ್ತಾಪದ ಕ್ಷಮಾಪಣೆಯ ಗೌರವದ ಪ್ರಾರ್ಥನೆಯ ಕಾಲುವೆಯೇ ಹರಿದುದೊ ಎಂಬಂತೆ ಸಪ್ರಯತ್ನವಾಗಿ ನೀಡಿದರು! ಹೂವಯ್ಯನೂ ರಕ್ತ ಮಾಂಸಗಳಿಂದ ಕೂಡಿ ಸುಪುಷ್ಪವಾಗಿದ್ದ ತನ್ನ ಸಶಕ್ತ ಸಜೀವ ಹಸ್ತದಿಂದ ಆ ಪ್ರೇತ ಹಸ್ತವನ್ನು ಅನಂತ ಕ್ಷಮೆಯಿಂದಲೂ ಪ್ರೀತಿಯಿಂದಲೂ ಎದೆಗೆರಗಿ ಹಿಡಿದುಕೊಂಡು ಉಕ್ಕಿ ಬರುತ್ತಿದ್ದ ಅಸಂಖ್ಯ ಭಾವಗಳ ಆ ವೇಗವನ್ನ ತಡೆಯಲಾರದೆ ಸುಮ್ಮನೆ ಕಣ್ಣೀರಿಡತೊಡಗಿದನು. ಬಾಗಿ ಕುಳಿತಿದ್ದ ಅವನ ಕಣ್ಣಿನ ಹನಿಗಳು ಆ ಪ್ರೇತ ಹಸ್ತದ ಮೇಲೆ ಬೆಚ್ಚಗೆ ಬಿದ್ದುವು."[2] ಕೆಲವು ದಿನಗಳ ಅನಂತರ ಚಂದ್ರಯ್ಯ ಗೌಡರು ಇಹಲೋಕ ತ್ಯಜಿಸುತ್ತಾರೆ.

**ರಾಮಯ್ಯ**

ಈತ ಚಂದ್ರಯ್ಯ ಗೌಡರ ಮೊದಲ ಹೆಂಡತಿಯ ಮಗ. ಈತ ಹೂವಯ್ಯನೊಡನೆ ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದ. ಹೂವಯ್ಯನ ಭಾವಸಮಾದಿ, ಆತ್ಮ ಸಾಂಗತ್ಯ ಎಲ್ಲವೂ ರಾಮಯ್ಯನಿಗೆ ಹಿತವನ್ನು ತರುತ್ತಿದ್ದವು. ತನ್ನ ತಂದೆ ಜೋಯಿಸರ ಮಾತು ಕೇಳಿ ಶಿಕ್ಷಣ ಕಲಿಯದಂತೆ ವಿರೋಧಿಸಿದರೂ, ಅದನ್ನ ಪ್ರತಿರೋಧಿಸದೆ ಇದ್ದ ಮುಗ್ಧ. ತನಗೆ ತಿಳಿಸದೆ ಮೂರನೇ ವಿವಾಹವಾದ ತನ್ನ ತಂದೆಯನ್ನು ವಿರೋಧಿಸಲು ಇಲ್ಲ ಹಾಗೂ ಬೇಸರಿಸಲೂ ಇಲ್ಲ.

ಹೂವಯ್ಯ ರಾಮಯ್ಯರು ಒಂದೇ ತಾಯಿಯ ಮಕ್ಕಳಂತೆ ಬದುಕುತ್ತಿದ್ದರು. ರಾಮಯ್ಯ ಎಂದೂ ದರ್ಪ ಅಹಂಕಾರದಿಂದ ನಡೆದುಕೊಳ್ಳಲಿಲ್ಲ. ಹೂವಯ್ಯನ ಸಂಪರ್ಕ, ಸಂದರ್ಭಗಳನ್ನ ಹೇಗೆ ನಿಭಾಯಿಸಬೇಕು ಎಂಬುದಕ್ಕೆ ಪರೋಕ್ಷ ಉತ್ತರ ನೀಡುತ್ತಿತ್ತು. ಹೂವಯ್ಯನು ಚಂದ್ರಯ್ಯ ಗೌಡರೊಡನೆ

[2] ಅದೇ. ಪು.ಸಂ.544

ವಾದಕ್ಕಿಳಿದಾಗ ರಾಮಯ್ಯ ಹೂವಯ್ಯನ ಪರವಾಗಿ ಇರುತ್ತಿದ್ದನು. ಇದು ಚಂದ್ರಯ್ಯ ಗೌಡರಿಗೆ ಇನ್ನಿಲ್ಲದ ಅಸಹನೆಯನ್ನು ಉಂಟು ಮಾಡುತ್ತಿತ್ತು. ತಾನು ಮೆಚ್ಚಿಕೊಂಡಿದ್ದ ಸೀತೆಯ ಆಕರ್ಷಣೆ ರಾಮಯ್ಯನನ್ನು ಹೂವಯ್ಯನಿಂದ ಪರೋಕ್ಷವಾಗಿ ದೂರ ಮಾಡುತ್ತಿತ್ತು. ಚಂದ್ರಯ್ಯ ಗೌಡರು ಶ್ಯಾಮಯ್ಯ ಗೌಡರ ಮಗಳು ಸೀತೆಯನ್ನು ರಾಮಯ್ಯನಿಗೆ ತರಬೇಕೆಂದು ಆಲೋಚಿಸುತ್ತಿರುವ ವೇಳೆಯಲ್ಲಿ, ಸೀತೆಗೆ ಕೃಷ್ಣಪ್ಪನೊಟ್ಟಿಗೆ ನಿಶ್ಚಯವಾಗಿದ್ದ ವಿವಾಹ ಮುರಿದುಬೀಳುತ್ತದೆ. ಇದೇ ಸುಸಂದರ್ಭವೆಂದು ಬಗೆದು ಚಂದ್ರಯ್ಯ ಗೌಡರು ರಾಮಯ್ಯನಿಗೆ ಸೀತೆಯನ್ನು ಕೇಳುತ್ತಾರೆ. ಅದಕ್ಕೆ ಶ್ಯಾಮಯ್ಯ ಗೌಡರು ಒಪ್ಪಿಗೆ ಸೂಚಿಸುತ್ತಾರೆ. ಸಿಂಗಪ್ಪ ಗೌಡರ ಒಳಸಂಚನ್ನು ರಾಮಯ್ಯನ ಮುಂದೆ ಬಯಲು ಮಾಡಿ ಚಂದ್ರಯ್ಯ ಗೌಡರು ಮಗ ತಮ್ಮ ಕಡೆಗೆ ವಾಲುವಂತೆ ನೋಡಿಕೊಳ್ಳುತ್ತಾರೆ. ಚಾಡಿ ಮಾತು ಕೇಳಿ ರಾಮಯ್ಯ ಹೂವಯ್ಯನೊಡನೆ ಈ ಮೊದಲಿನಂತೆ ವರ್ತಿಸುವುದನ್ನ ಬಿಡುತ್ತಾನೆ. ಸೀತೆಯು ಹೂವಯ್ಯನಿಗೆ ಬರೆದ ಪ್ರೇಮಪತ್ರ ತನ್ನ ಕೈತಲುಪಿದಾಗ ರಾಮಯ್ಯ ತನ್ನ ಬಳಿಯಲ್ಲಿಯೇ ಬಚ್ಚಿಡುತ್ತಾನೆ ಮತ್ತು ಸೀತೆಯನ್ನು ಹೂವಯ್ಯನಿಂದ ದೂರ ಮಾಡಲು ಪ್ರಯತ್ನಿಸುತ್ತಾನೆ. ಹೂವಯ್ಯನಿಂದ ದೂರಾದ ನಂತರ ರಾಮಯ್ಯ ಮೊದಲಿನ ಹರ್ಷವಾಗಲಿ, ನೆಮ್ಮದಿಯಾಗಲಿ ಕಾಣದೆ ಹೋಗುತ್ತಾನೆ. "ರಾಮಯ್ಯ ಬಹಳ ತೆಳ್ಳಗಾಗಿ ಹೋಗಿದ್ದನು. ಮುಖದಲ್ಲಿ ನಿರ್ವೀಯತೆ, ಖಿನ್ನತೆ, ಬಳಲಿಕೆಗಳು ಬರೆದಂತಿದ್ದವು. ಕೆನ್ನೆಗಳೆರಡು ಬತ್ತಿ ಹೋಗಿದ್ದುದರಿಂದ, ಕಣ್ಣಿನ ಕೆಳಗೆ ಎಲುಬು ಹೊರಗೆ ಚಾಚಿಕೊಂಡಿತ್ತು. ಎಲ್ಲಕ್ಕಿಂತಲೂ ಆಶ್ಚರ್ಯಕರವಾದುದೆಂದರೆ ಅವನ ಉಡುಪು ಅದರಲ್ಲಿ ನವೀನತೆ ಎನ್ನುವುದು ಲವಲೇಶವು ಕಾಣುತ್ತಿರಲಿಲ್ಲ. ಅದರಲ್ಲಿಯೂ ಕೂಡ ತಂದೆಯ ಅಭಿರುಚಿಗೆ ಸಂಪೂರ್ಣವಾಗಿ ಶರಣಾಗಿದ್ದಂತೆ ತೋರುತ್ತಿತ್ತು. ಅವನು ತೊಟ್ಟಿದ್ದ ಜರಿಯ ಪೇಟದ ಒಳಗಡೆ ಕ್ರಾಫಿನ ಹೊಸ ರೋಗಕ್ಕೆ ಜುಟ್ಟಿನ ಹಳೆಯ ರೋಗ ಹಿಡಿದಿತ್ತು. ಖಾದಿ ಬಟ್ಟೆ, ಗಾಂಧಿ ಟೋಪಿ, ಸ್ವದೇಶಗಳೆಲ್ಲ ಎಲ್ಲಿಯೋ ಗಾಳಿಯಲ್ಲಿ ಹಾರಿ ಹೋಗಿದ್ದವು"[3] ಹೂವಯ್ಯನ ಸಂಪರ್ಕದಿಂದ ದೂರಾದ ಮೇಲೆ ರಾಮಯ್ಯನ ವ್ಯಕ್ತಿತ್ವದಲ್ಲಿ ಈ ರೀತಿಯಾಗಿ ಬದಲಾವಣೆ ಕಂಡುಬಂದಿತು.

ಹೀಗೆ ವರನಾದ ರಾಮಯ್ಯನಿಗೆ ಸಾಲಂಕೃತ ಶವವಾದ ಸೀತೆ ವಧುವಾಗಿದ್ದು, ವಿಷಾದನೀಯ ಸಂದರ್ಭ. ತಾನು ಯಾವುದೋ ಕ್ರೂರ ಕರ್ಮದಲ್ಲಿ ಭಾಗಿಯಾದಂತೆ ರಾಮಯ್ಯನಿಗೆ ಭಾಸವಾಗತೊಡಗಿತು. ಸುತ್ತ ನೆರೆದವರ ಮೇಲೆ ಆತನಿಗೆ ದ್ವೇಷ ಉಂಟಾಯಿತು. ಆತನ ಮನಸ್ಸು ಹೂವಯ್ಯನನ್ನ ಹುಡುಕುತ್ತಿತ್ತು. ಮದುವೆಯ ಮಂಟಪ ಸುಡುಗಾಡಿನಂತೆ ರಾಮಯ್ಯನಿಗೆ ಕಾಣಿಸತೊಡಗಿತು. ವಿವಾಹ ಬೇಡವೆನಿಸಿ ರಾಮಯ್ಯನ ಕೈಯಿಂದ ಮಾಂಗಲ್ಯ ಜಾರಿ ಬಿದ್ದಿತು. ಜೋಯಿಸರು ಬಿದ್ದ ತಾಳಿಯನ್ನ ರಾಮಯ್ಯನ ಕೈಮುಟ್ಟಿಸಿ ಸೀತೆಗೆ ತಾವೇ ಕಟ್ಟಿಬಿಡುತ್ತಾರೆ. ಇದನ್ನ ರಾಮಯ್ಯನಿಗೆ ವಿರೋಧಿಸುವ ಶಕ್ತಿಯು ಇರಲಿಲ್ಲ. ಈ ಕಾರಣದಿಂದಾಗಿ ಆಕೆ ರಾಮಯ್ಯನೊಂದಿಗೆ ಬಾಳದೆ ತವರು ಮನೆ ಸೇರುತ್ತಾಳೆ. ಮತ್ತೆ ಚಂದ್ರಯ್ಯ ಗೌಡರು ತಮ್ಮ ದರ್ಪ ತೋರಿ ಮಗನ ಸಂಸಾರ ಸರಿ ಮಾಡಲು ಮುಂದಾಗುತ್ತಾರೆ. ಇದಕ್ಕೊಪ್ಪದ ಸೀತೆ ರಾಮಯ್ಯನನ್ನು ಎಂದೂ ತನ್ನ ಪತಿಯೆಂದು ಪರಿಗಣಿಸುವುದಿಲ್ಲ. ಇದಾದ ಅನಂತರ ಸೀತೆಯಿಂದ ದೂರಾದ ರಾಮಯ್ಯನ ಮನಸ್ಸು ಹತಾಶೆಗೊಂಡಿತು. ಚಂದ್ರಯ್ಯ ಗೌಡರ ಮರಣದ ಬಳಿಕ ಹೆಗ್ಗಡಿತಿಯಾಗಿ ಸುಬ್ಬಮ್ಮ ಮನೆ ಸೇರುತ್ತಾಳೆ. ಕೆಲವು ದಿನ ಕಳೆದಂತೆ ಸೇರೆಗಾರ ರಂಗಪ್ಪ ಸೆಟ್ಟಿಯ ಬಲೆಗೆ ಸಿಲುಕಿ ಗರ್ಭವತಿಯಾಗುತ್ತಾಳೆ. "ಬಂದೊದಗುವ ಅವಮಾನದ ಮುಂದೆ ಬದುಕಿದ್ದರೂ ಸತ್ತಂತೆ ಎಂದು ತೋರಿತು. ಬಹುಕಾಲದಿಂದಲೂ ಮನಸ್ಸಿನಲ್ಲಿ ಇಣಿಕಿ

[3] ಅದೇ. ಪು.ಸಂ.441

ಇಣಿಕಿ ಹೊಂಚಿ ಹೋಗುತ್ತಿದ್ದ ಆತ್ಮಹತ್ಯೆಯ ಪಿಶಾಚ ಸಾಕಾರವಾಗಿ ಅವನ ಎದುರು ನಿಂತು ಆಹ್ವಾನಿಸಿತು ಬಾಳಿನ ಹೊರೆ ತನ್ನ ಬೆನ್ನು ಮೂಳೆಯ ಬಲಕ್ಕೆ ಮೀರಿದ್ದಂತೆ ತೋರಿತು. ಜೀವನದ ಜಟಿಲ ಸಮಸ್ಯೆ ತನ್ನಿಂದ ಬಿಡಿಸಲಸಾಧ್ಯವಾಗಿ ತೋರಿತು"[4] ತಾನು ಹೂವಯ್ಯನನ್ನು ಅಪಾರ್ಥ ಮಾಡಿಕೊಂಡಿದ್ದು, ಆತನಿಂದ ಸೀತೆಯನ್ನು ದೂರಾಗಿಸಿ ದ್ರೋಹ ಬಗೆದದ್ದು, ತಂದೆಯ ಮರಣ ಈ ಮುಂತಾದ ಕಾರಣಗಳಿಂದ ರಾಮಯ್ಯನ ಮನಸ್ಸು ಜರ್ಝರಿತಗೊಂಡಿತ್ತು. ಬದುಕು ಹೇಯವೆನಿಸಿ, ಪಶ್ಚಾತ್ತಾಪದಲ್ಲಿ ಮಿಂದೆದ್ದವನು. ಮುಂದೆ ರಾಮಯ್ಯನ ಮನಸ್ಸು ದುರ್ಬಲಗೊಂಡು ಆತ್ಮಹತ್ಯೆ ಮಾಡಿಕೊಂಡನು.

**ಸುಬ್ಬಮ್ಮ**

ಈಕೆ ಚಂದ್ರಯ್ಯ ಗೌಡರ ಮೂರನೇ ಹೆಂಡತಿ. ನೆಲ್ಲೂರಿನ ಪೆದ್ದೇಗೌಡರ ಮಗಳು ಸುಬ್ಬಿ. ಈಕೆ ಚಂದ್ರಯ್ಯ ಗೌಡರನ್ನ ವಿವಾಹವಾಗಿ ಕಾನೂರಿನ ಹೆಗ್ಗಡಿತಿಯ ಪಟ್ಟವನ್ನು ಪಡೆದಳು. ಸಾಮಾನ್ಯ ಬಡ ಹುಡುಗಿಯಾದ ಸುಬ್ಬಿ, ಚಂದ್ರಯ್ಯ ಗೌಡರ ಕೃಪೆಯಿಂದ ಹೆಗ್ಗಡಿತಿ ಸುಬ್ಬಮ್ಮಳಾದಾಗ ಸರ್ವೇ ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿ ನಡೆಯುವ ಕಲಹ ಕಾನೂರಿನಲ್ಲಿ ಅತಿಯಾಗಿ ಜರುಗುತ್ತದೆ ಮಲತಾಯಿಯಾಗಿ ವಾಸು ಪುಟ್ಟಮ್ಮರನ್ನ ಕಾಳಜಿಯಿಂದ ನೋಡಿಕೊಳ್ಳದೆ ಎಲ್ಲರಿಂದಲೂ ತಾತ್ಸಾರಕ್ಕೆ ಒಳಗಾಗುತ್ತಾಳೆ "ದಾರಿದ್ರದಲ್ಲಿ ಹುಟ್ಟಿ ಬೆಳೆದು ಅಸಂಸ್ಕೃತದಿಂದ ಪೋಷಿತವಾಗಿ ಅವರ ನಡೆ–ನುಡಿ ಆಚಾರ ವ್ಯವಹಾರ ಶೀಲಗಳನ್ನ ಕಲಿತ ಸುಬ್ಬಮ್ಮನಲ್ಲಿ ಸುಸಂಸ್ಕೃತ ಸ್ತ್ರೀ ಸಹಜವಾದ ಔದಾರ್ಯ ಗಾಂಭೀರ್ಯ ನಯ ವಿನಯ ಸಂಯಮ ಸಂಚಲನಗಳು ಒಂದಿನಿತೂ ಇರಲಿಲ್ಲ ಆದ ಕಾರಣ ಅದುವರೆಗೂ ಅವಕಾಶ ಸಿಕ್ಕದೆ ಸೂಕ್ತವಾಗಿದ್ದ ಅಹಂಕಾರ ಛಲ ದರ್ಪ ಸ್ವಾರ್ಥಪರತೆ ದುರಭಿಮಾನ ಮೊದಲಾದ ಕಾಡು ಭಾವಗಳು ಆಕೆ ಯಜಮಾನರ ಪತ್ನಿಯಾಗಿ ಕಾನೂರಿಗೆ ಹೆಗ್ಗಡಿತಿಯಾದ ಕೂಡಲೇ ಭಯಾನಕವಾಗಿ ಹೆಡೆಯುತ್ತಿ ನಿಂತವು ಆಕೆ ಎಲ್ಲದರಲ್ಲಿಯೂ ಎಲ್ಲರ ಮೇಲೆಯೂ ನಿರ್ದಾಕ್ಷಿಣ್ಯವಾಗಿ ಹುಕುಂ ಚಲಾಯಿಸ ತೊಡಗಿದಳು"[5] ಅಲ್ಲದೆ ತುಪ್ಪ ಬೆಣ್ಣೆ ಮುಂತಾದ ತಿನಿಸುಗಳಿಗೆ ಹೆಗ್ಗಡಿತಿಯ ಬೀಗ ಮುದ್ರೆ ಮಾಡಿ ಕಲಹಕ್ಕೆ ನಾಂದಿ ಹಾಡಿದಳು. ನಿತ್ಯವು ಜಗಳವಾಡುತ್ತಿದ್ದ ಸುಬ್ಬಮ್ಮನ ಆಳ್ವಿಕೆಯನ್ನ ಮನೆಮಂದಿ ಸಹಿಸಲಿಲ್ಲ.

ಚಂದ್ರಯ್ಯ ಗೌಡರು ಬಾಹ್ಯವಾಗಿ ದರ್ಪ ತೋರಿದರು ಅಂತರಂಗದಲ್ಲಿ ಸುಬ್ಬಮ್ಮಳ ಕೈಗೊಂಬೆಯಾಗಿದ್ದರು. ಅದನ್ನೇ ಬಂಡವಾಳ ಮಾಡಿಕೊಂಡ ಸುಬ್ಬಮ್ಮ ಮಿತಿಮೀರಿ ವರ್ತಿಸ ತೊಡಗಿದಳು. ಒಮ್ಮೆ ಅಣ್ಣಯ್ಯ ಗೌಡ, ವೆಂಕಪ್ಪ ಜೋಯಿಸರ ಮುಂದೆ ಮನೆಯ ಕಲಹ ಅನಾವರಣಗೊಂಡಿದ್ದರಿಂದ ಚಂದ್ರಯ್ಯ ಗೌಡರ ಕೋಪ ಎಲ್ಲೆ ಮೀರಿತ್ತು ಅದರ ಪರಿಣಾಮ ಸುಬ್ಬಮ್ಮ ಚಂದ್ರಯ್ಯ ಗೌಡರಿಂದ ಏಟು ತಿನ್ನುವುದು. ಅಂದಿನಿಂದ ಅವರ ದಾಂಪತ್ಯದಲ್ಲಿ ಬಿರುಕು ಮೂಡಲಾರಂಭಿಸಿತು. ಕೂಡು ಕುಟುಂಬವಿದ್ದರೂ ಸುಬ್ಬಮ್ಮ ಏಕಾಂಗಿಯಾಗಿ ಉಳಿಯುತ್ತಿದ್ದಳು. ಸೇರೆಗಾರ ರಂಗಪ್ಪ ಸೆಟ್ಟಿ, ಗಂಗೆ, ಓಬಯ್ಯ ಈ ಮೂವರೆ ಅವಳ ಆಪ್ತ ವರ್ಗಕ್ಕೆ ಸೇರಿದವರಾಗಿದ್ದರು. ಕ್ರಮೇಣ ಸುಬ್ಬಮ್ಮಳ ವರ್ತನೆಯಲ್ಲಿ ಬದಲಾವಣೆ ಕಾಣಲಾರಂಭಿಸಿತ್ತು. ಹೂವಯ್ಯನ ಗಂಭೀರತೆಯನ್ನು ನೋಡಿ ಆಕೆ ತನ್ನ ಒರಟುತನಕ್ಕೆ ಹಂತ ಹಂತವಾಗಿ ವಿದಾಯವನ್ನು ಹೇಳಿದಳು. ಮುಂದುವರೆದು ಸೇರೆಗಾರ ರಂಗಪ್ಪ ಸೆಟ್ಟರು ಸುಬ್ಬಮ್ಮನ ಪರವಾಗಿದ್ದು, ಚಂದ್ರಯ್ಯ ಗೌಡರಿಗೆ ಅನುಮಾನದ ಹುತ್ತ ಬೆಳೆಯಲು ಕಾರಣವಾಗುತ್ತದೆ. ಮುಂದೆ ಕಾನೂರಿನ ಮನೆ ಇಬ್ಭಾಗವಾದಾಗ ಬೆಲೆಬಾಳುವ ಒಡವೆ

[4] ಅದೇ. ಪು.ಸಂ.583

[5] ಅದೇ. ಪು.ಸಂ.36

ವಸ್ತುಗಳು ಹೆಗ್ಗಡಿತಿಯ ಪಾಲಾಗುತ್ತದೆ. ಮುಂದೆ ಚಂದ್ರಯ್ಯ ಗೌಡರ ಕಾಟ ತಾಳಲಾರದೆ ಬಂದೂಕಿನಿಂದ ತಪ್ಪಿಸಿಕೊಂಡು ನೆಲ್ಲೂರಿನ ತವರು ಮನೆಯ ಆಶ್ರಯವನ್ನು ಪಡೆಯುತ್ತಾಳೆ. ಹೆಗ್ಗಡಿತಿಯಾಗಿ ಸುಖದಿಂದ ಬಾಳನ್ನ ನಡೆಸಬೇಕಾಗಿದ್ದಾಕೆ, ತನ್ನ ಈ ಮುನ್ನಿನ ಬಡತನದ ಬದುಕಿಗೆ ಹಿಂತಿರುಗುವುದು ವಿಷಾದನೀಯ. ಗಂಗೆಯ ಸಹವಾಸದಿಂದ ತಾಂಬೂಲ ಜಗಿಯುವುದು, ಆಕೆಯ ಬಿಡಾರಕ್ಕೆ ತೆರಳಿ ಕಳ್ಳು ಕುಡಿಯುವುದು ಮಾಡುತ್ತಿದ್ದಳು. "ಅಸಂಸ್ಕೃತಿಯು ಕುಸಂಸ್ಕೃತಿಯ ಬಲೆಗೆ ಮೆಲ್ಲಮೆಲ್ಲನೆ ತನಗರಿಯದಂತೆ ಬೀಳುತ್ತಿತ್ತು"[6] ಸುಬ್ಬಮ್ಮಳಿಗೆ ನಾಗಮ್ಮ ಅನೇಕ ಬಾರಿ ಎಚ್ಚರಿಕೆ ನೀಡಿದರೂ ಅದನ್ನು ಮತ್ಸರವೆಂದು ತಿಳಿದು ನಿರ್ಲಕ್ಷಿಸಿದಳು. ಚಂದ್ರಯ್ಯ ಗೌಡರು ಗಂಗೆಯ ದಾಕ್ಷಿಣ್ಯಕ್ಕೆ ಒಳಗಾದ್ದರಿಂದ ಅಂತರಂಗದಲ್ಲಿ ಕಳವಳಿಸುತ್ತಿದ್ದರು. ಹೆಗ್ಗಡಿತಿಯಾಗಿ ಸುಸಂಸ್ಕೃತವಾಗಿ ನಡೆದುಕೊಳ್ಳುವ ಬದಲು ಈ ರೀತಿಯಾಗಿ ವರ್ತಿಸುವುದು ಸರಿಯಲ್ಲವೆಂಬುದು ಅವರಿಗೂ ತಿಳಿದಿತ್ತು.

ಹಲವು ದಿನಗಳು ಕಳೆದ ಬಳಿಕ ಹೆಗ್ಗಡಿತಿಯ ಜಾಗಕ್ಕೆ ಗಂಗೆ ಬಂದು ನಿಲ್ಲುತ್ತಾಳೆ. ಚಂದ್ರಯ್ಯ ಗೌಡರು ಧರ್ಮಸ್ಥಳಕ್ಕೆ ಹೋಗಿರುವಾಗ ಸೇರೆಗಾರ ರಂಗಪ್ಪ ಸೆಟ್ಟರು ಮತ್ತು ಗಂಗೆ ಒಟ್ಟಾಗಿ ಕಾನೂರಿನ ಮನೆಯನ್ನ ಧೂಳಿಪಟ ಮಾಡುತ್ತಾರೆ. ಈ ವಿಷಯ ತಿಳಿದ ಸುಬ್ಬಮ್ಮ ಕಾನೂರಿನ ಮನೆಗೆ ಬಂದು ತನ್ನ ವಸ್ತುಗಳನ್ನು ಸಾಗಿಸುತ್ತಾಳೆ. ಅದನ್ನು ತಡೆಯಲು ಅನುವಾದ ಗಂಗೆಗೆ ಸುಬ್ಬಮ್ಮ ಹೊಡೆದು ಅಲ್ಲಿಂದ ಕೆಳಕಾನೂರಿನ ಹೂವಯ್ಯನ ಮನೆಗೆ ತೆರಳುತ್ತಾಳೆ. ತನ್ನ ಒಡವೆಗಳನ್ನು ಹೂವಯ್ಯನಲ್ಲಿಟ್ಟು ತವರಿಗೆ ಹೊರಡುತ್ತಾಳೆ. ಅಲ್ಲಿಂದ ಸುಬ್ಬಮ್ಮಳನ್ನ ತಂದೆ ತಾಯಿ ತಾತ್ಸಾರದಿಂದ ಕಾಣಲು ತೊಡಗುತ್ತಾರೆ. ಗಂಡನನ್ನು ಬಿಟ್ಟು ಹೆಣ್ಣು ತವರಿಗೆ ಬಂದು ನೆಮ್ಮದಿ ಕಾಣಲಸಾಧ್ಯ ಎಂಬ ಸತ್ಯವನ್ನು ಸುಬ್ಬಮ್ಮ ಅರಿಯುತ್ತಾಳೆ. ನೆರೆಹೊರೆಯವರ ಕುಹಕದ ಮಾತಿನಿಂದ ದುಃಖಿತಾಗುತ್ತಾಳೆ. ಸೇರೆಗಾರ ರಂಗಪ್ಪಸೆಟ್ಟರು ಸುಬ್ಬಮ್ಮಳ ಮೇಲೆ ಕಾಮುಕತನದಿಂದ ವರ್ತಿಸಲು ಪ್ರತಿ ಸಲವೂ ಹೊಂಚು ಹಾಕುತ್ತಿರುತ್ತಾನೆ. ಆದರೆ ಆ ಕಾರ್ಯದಿಂದ ಪದೇಪದೇ ವಿಫಲನಾಗುತ್ತಿರುತ್ತಾನೆ. ಚಂದ್ರಯ್ಯ ಗೌಡರು ಬರ ಹೇಳಿದ್ದಾರೆಂದು ಸುಳ್ಳು ಹೇಳಿ ತನ್ನ ಕಾರ್ಯವನ್ನು ಸಾಧಿಸಿಕೊಳ್ಳಲು ಪ್ರಯತ್ನಿಸುವನು. ಆದರೆ ಕೊನೆಯ ಬಾರಿ ಈ ಕಾರ್ಯದಲ್ಲಿ ಸಫಲನಾಗಿ ಕಾದಂಬರಿಯ ಅಂತ್ಯದಲ್ಲಿ ಕಾನೂರಿನಿಂದ ಪಲಾಯನವನ್ನು ಮಾಡುವನು. ರೋಗಗ್ರಸ್ತ ಚಂದ್ರಯ್ಯ ಗೌಡರು ಹೇಳಿ ಕಳಿಸಿದ ತಕ್ಷಣವೇ ಸುಬ್ಬಮ್ಮ ಹಿಂದು ಮುಂದು ಯೋಚಿಸದೆ ಕಾನೂರಿಗೆ ಹೊರಟುಬಿಡುತ್ತಾಳೆ. ತಾಯಿ ಮಗುವನ್ನು ನೋಡಿಕೊಳ್ಳುವಂತೆ ಚಂದ್ರಯ್ಯ ಗೌಡರನ್ನ ಸುಬ್ಬಮ್ಮಳು ಆರೈಕೆ ಮಾಡುತ್ತಾಳೆ.

ಚಂದ್ರಯ್ಯ ಗೌಡರು ಮರಣ ಹೊಂದಿದ ಬಳಿಕ ಮನೆಯ ಜವಾಬ್ದಾರಿಯನ್ನ ಸುಬ್ಬಮ್ಮ ವಹಿಸಿಕೊಳ್ಳುತ್ತಾಳೆ. ಸಮರ್ಥವಾಗಿ ನಿಭಾಯಿಸುವ ಬದಲು ಸೇರೆಗಾರರ ಬಲೆಗೆ ಸಿಲುಕಿ ನರಳುತ್ತಾಳೆ. ಆತನೊಟ್ಟಿಗೆ ಅಕ್ರಮ ಸಂಬಂಧ ಹೊಂದಿ ಗರ್ಭಿಣಿಯಾಗುತ್ತಾಳೆ. ಗಂಡ ಸತ್ತ ವಿಧವೆ ಮಗು ಹಡೆಯುವುದು ಒಪ್ಪಿತವಲ್ಲದ ಕಾರ್ಯವೆಂದು ತಿಳಿದಿದ್ದರೂ ಅನೈತಿಕ ಮಾರ್ಗದಲ್ಲಿ ಸಾಗುತ್ತಾಳೆ. "ಬಡತನದಲ್ಲಿ ಹುಟ್ಟಿ ದುಡಿದಿದ್ದ ಆಕೆಗೆ ಈಗ ವಿರಾಮದಲ್ಲಿ ಮೈ ಕೊಬ್ಬಿತ್ತು ಸಂಸ್ಕೃತಿ ಇಲ್ಲದ ಮತ್ತು ಸಂಸ್ಕೃತಿಗಾಗಿ ಅಲ್ಲದ ವಿರಾಮ ನರಕಕ್ಕೆ ದಾರಿ"[7] ಎಂಬಂತೆ ಸುಬ್ಬಮ್ಮ ದುರಂತವನ್ನು ತಾನಾಗಿಯೇ ಅಪ್ಪಿಕೊಂಡಳು. ಸೇರೆಗಾರ ರಂಗಪ್ಪಸೆಟ್ಟಿ ಮತ್ತು ಗಂಗೆಯರ ಮಾತಿಗೆ ಮರುಳಾಗಿ ಮನೆತನದ ಮಾನ ತೆಗೆಯುತ್ತಾಳೆ. ಮನೆತನದ ಮರ್ಯಾದೆಗಾಗಿ ಗಂಗೆಯಿಂದ ಮದ್ದು ತೆಗೆದುಕೊಂಡು ಮಗುವನ್ನು

6 ಅದೇ. ಪು.ಸಂ.144

7 ಅದೇ. ಪು.ಸಂ.563

ಕೊಲ್ಲಲು ಮುಂದಾಗುತ್ತಾಳೆ. ಆ ಪ್ರಯತ್ನದಲ್ಲಿ ತಾನು ಸೋತು ಶವವಾಗುತ್ತಾಳೆ. ಇದೆಲ್ಲವನ್ನು ನೋಡಿದ ರಾಮಯ್ಯ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ಹೀಗೆ ಒಂದೇ ಕುಟುಂಬದ ಮೂವರು ದುರಂತ ಅಂತ್ಯವನ್ನು ಕಾಣುತ್ತಾರೆ.

ಚಂದ್ರಯ್ಯ ಗೌಡರದು ಸಹಜ ಸಾವು. ಸುಬ್ಬಮ್ಮ ಮತ್ತು ರಾಮಯ್ಯರು ತಮ್ಮ ಕೈಯಾರೆ ತಾವೇ ಸಾವನ್ನ ಅಪ್ಪಿಕೊಳ್ಳುತ್ತಾರೆ. ಒಂದೇ ಕುಟುಂಬದ ಮೂವರು ದುರಂತ ಅಂತ್ಯ ಕಾಣುತ್ತಾರೆ. ಸುಬ್ಬಮ್ಮ ರಾಮಯ್ಯನಿಗೆ ಮಲತಾಯಿ ಆದರೂ ಅವರ ನಡುವೆ ಕಾದಂಬರಿಯಲ್ಲಿ ಕಲಹಗಳು ಏರ್ಪಡುವುದಿಲ್ಲ. ಕಾದಂಬರಿಯಲ್ಲಿ ಇವರೀರ್ವರಿಗೆ ಮುಖಾಮುಖಿ ಯಾಗುವ ಸಂದರ್ಭಗಳು ಚಿತ್ರಣವಾಗಿರುವುದು ಕಡಿಮೆ ಎಂದೇ ಹೇಳಬಹುದು. ರಾಮಯ್ಯ ತಂದೆಯ ನಡವಳಿಕೆಯನ್ನು ಜೀವನಪರ್ಯಂತ ವಿರೋಧಿಸದೆ ಮೌನದಿಂದ ಸಹಿಸಿದನು. ಕಾದಂಬರಿಯಲ್ಲಿ ಚಿತ್ರಣಗೊಂಡ ರಾಮಯ್ಯನ ಪಾತ್ರ ಆರಂಭಿಕವಾಗಿ ಸುಖ ಕಂಡು ಮಧ್ಯಂತರದಿಂದ ಹತಾಶೆಯಿಂದ ಬಳಲುವ ಪಾತ್ರವಾಗಿ ಚಿತ್ರಣಗೊಂಡಿದೆ. ಮೂರು ಪಾತ್ರಗಳು ಪಶ್ಚಾತಾಪದಿಂದ ಮಿಂದೇಳುತ್ತವೆ. ತಾವು ಬದುಕಿನಲ್ಲಿ ಅನುಸರಿಸಿದ ಮಾರ್ಗ ಒಳಿತಲ್ಲವೆಂದು ಮೂರು ಪಾತ್ರಗಳು ತಿಳಿಯುತ್ತವೆ.

ಒಂದೇ ಕುಟುಂಬದ ಈ ಮೂರು ಪಾತ್ರಗಳು ತಮ್ಮ ಜೀವನಕ್ರಮದಲ್ಲಿ ನಡೆಯುವ ಹಾದಿ ಒಂದೇ ತೆರನಾಗಿದೆ. ಚಂದ್ರಯ್ಯ ಗೌಡರು ಆರಂಭದಲ್ಲಿ ದರ್ಪ, ಅಧಿಕಾರ, ಸ್ವಾರ್ಥ, ಅಹಂಕಾರದ ಮದದಲ್ಲಿ ವರ್ತಿಸಿ ಎಲ್ಲರೊಂದಿಗೆ ನಿಷ್ಠೂರತೆಯಿಂದ ನಡೆದುಕೊಳ್ಳುತ್ತಾರೆ. ತಮ್ಮ ಕೊನೆಯ ದಿನಗಳಲ್ಲಿ ಮೇಲಿನ ರೀತಿ ವರ್ತಿಸದೆ ಪಶ್ಚಾತಾಪದಿಂದ ಕೊರಗುತ್ತಾರೆ. ಚಂದ್ರಯ್ಯ ಗೌಡರು ಕ್ಷಮೆಯಾಚನೆಗಾಗಿ ಹೂವಯ್ಯನಿಗೆ ಕಣ್ಣೀರ ಧಾರೆಯನ್ನ ಅರ್ಪಿಸುವುದರೊಂದಿಗೆ ತಮ್ಮ ಎರಡು ಕೈಗಳನ್ನ ಮುಗಿಯುತ್ತಾರೆ. ರಾಮಯ್ಯ ಆರಂಭದಲ್ಲಿ ಹೂವಯ್ಯನ ಸಂಪರ್ಕದೊಂದಿಗೆ ಬದುಕನ್ನು ಕಟ್ಟಿಕೊಂಡು ಓದುಗರನ್ನು ತನ್ನತ್ತ ಆಕರ್ಷಿಸುವ ಪಾತ್ರವಾಗಿದ್ದಾನೆ. ಹೂವಯ್ಯನ ಸಾನಿಧ್ಯ ತನ್ನ ತಂದೆಯ ನಡವಳಿಕೆಯನ್ನ ಪ್ರಶ್ನಿಸುವಂತೆ ಮಾಡುತ್ತದೆ. ಕಾದಂಬರಿಯ ಮಧ್ಯ ಭಾಗಕ್ಕೆ ಬಂದರೆ ರಾಮಯ್ಯನ ಪಾತ್ರದಲ್ಲಿ ತೀವ್ರತರವಾದ ಬದಲಾವಣೆ ಕಂಡುಬರುತ್ತದೆ. ರಾಮಯ್ಯ ಮತ್ತು ಹೂವಯ್ಯರ ಸಂಬಂಧದಲ್ಲಿ ಬಿರುಕು ಮೂಡುತ್ತದೆ. ಸಂಪರ್ಕ ಕಡೆದು ಹೋದಂತೆ ರಾಮಯ್ಯ ಕೆಟ್ಟ ಮಾರ್ಗದಲ್ಲಿ ನಡೆಯುತ್ತಾನೆ. ಸೀತೆಯನ್ನ ಪಡೆಯಲು ಇನ್ನಿಲ್ಲದ ಹರಸಾಹಸ ಮಾಡುತ್ತಾನೆ. ಹೀಗೆ ಸೀತೆಯನ್ನ ಹೂವಯ್ಯನಿಗೆ ಒಪ್ಪಿಸಬಿಡಬೇಕೆಂದು ಹೋಗುವಷ್ಟರಲ್ಲಿ ಅವನ ಅರಿವಿಗೆ ಬಾರದಂತೆ ಅವಾಂತರಗಳು ನಡೆಯುತ್ತಾ ಹೋಗುತ್ತವೆ. ಹೆಂಡತಿ ಸೀತೆಯಿಂದ ದೂರಾಗಿ ಮಾನಸಿಕ ದ್ವಂದ್ವಕ್ಕೆ ಒಳಗಾಗುತ್ತಾನೆ. ಕೊನೆಗೆ ತನ್ನ ಮಲತಾಯಿ ಮಾಡಿದ ಸಮಾಜ ಬಾಹಿರ ಕೆಲಸವನ್ನು ಪ್ರಶ್ನಿಸದೆ ಅವಮಾನಿತನಾಗಿ ಹೇಡಿಯಂತೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಸುಬ್ಬಮ್ಮಳ ಪಾತ್ರವು ಕಾದಂಬರಿಯಲ್ಲಿ ಆರಂಭಿಕವಾಗಿ ಬಡತನದ ಬೇಗೆಯಲ್ಲಿ ಬೆಂದ ಹೆಣ್ಣಿನ ಚಿತ್ರಣವನ್ನು ನೀಡುತ್ತದೆ. ತದನಂತರ ಹೆಗ್ಗಡಿತಿಯಾಗಿ ಸುಖವಾಗಿ ಒಂದಷ್ಟು ದಿನ ನಾಗಮ್ಮ ಪುಟ್ಟಮ್ಮ ವಾಸುವಿನ ಮೇಲೆ ದಬ್ಬಾಳಿಕೆ ನಡೆಸಿ ತನ್ನ ಜೀವನವನ್ನು ಕಟ್ಟಿಕೊಳ್ಳುತ್ತಾಳೆ. ಹಂತ ಹಂತವಾಗಿ ತನ್ನ ಪತಿ ಚಂದ್ರಯ್ಯ ಗೌಡರ ತಾತ್ಸಾರಕ್ಕೆ ಒಳಗಾಗುತ್ತಾಳೆ. ಈಕೆ ಹೆಗ್ಗಡಿತಿಯಾಗಿ ಉತ್ತಮವಾಗಿ ಜೀವನ ನಿರ್ವಹಿಸಲು ಸಾಕಷ್ಟು ಅವಕಾಶಗಳು ಇದ್ದರೂ ಅವೆಲ್ಲದರಿಂದ ತಾನೇ ವಂಚಿತಳಾಗುತ್ತಾಳೆ. ತನ್ನ ಗಂಡನಿಂದ ದೂರಾಗಿ ತವರಿಗೆ ಸೇರಿದ ಅನಂತರ ನಾಗಮ್ಮ ಹೂವಯ್ಯರೊಡನೇ ಉತ್ತಮ ಸಂಬಂಧವನ್ನು ಇಟ್ಟುಕೊಳ್ಳುತ್ತಾಳೆ. ಕೊನೆಗೆ ತನ್ನ ಅಕ್ರಮ ಸಂಬಂಧದಿಂದ ಬದುಕಿಗೆ ತಾನೇ ತಿಲಾಂಜಲಿ ಹಾಡಿಕೊಳ್ಳುತ್ತಾಳೆ. ಹೀಗೆ ಮೇಲ್ಕಂಡ

ಮೂರು ಪಾತ್ರಗಳು ದುರಂತದಲ್ಲಿ ಮುಳುಗುವ ಮುನ್ನ ಪಶ್ಚಾತ್ತಾಪದಿಂದ ಮರುಗುತ್ತವೆ.

**ಆಕರ ಗ್ರಂಥ**


- ಕುವೆಂಪು. (2009). *ಕಾನೂರು ಹೆಗ್ಗಡಿತಿ.* ಉದಯ ರವಿ ಪ್ರಕಾಶನ.


**ಪರಾಮರ್ಶನ ಗ್ರಂಥಗಳು**


- ಆಮೂರ ಜಿ.ಎಸ್. (1994). *ಕನ್ನಡ ಕಥನ ಸಾಹಿತ್ಯ ಕಾದಂಬರಿ.* ಶ್ರೀ ಹರಿ ಪ್ರಕಾಶನ.
- ಗುರುಪಾದ ಮರಿಗುದ್ದಿ. (2004). *ಕುವೆಂಪು ಕಾದಂಬರಿಗಳು.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ನಾಗಭೂಷಣ ಡಿ. ಎಸ್. (ಸಂ.). *ಕುವೆಂಪು ಪುನರ್ನ್ವೇಷಣೆ.* ಲೋಹಿಯಾ ಪ್ರಕಾಶನ.
- ರಾಜೇಗೌಡ ಹ.ಕ. (ಸಂ.) (1983). *ಕುವೆಂಪು ಸಾಹಿತ್ಯ ಲೋಕ–1.* ಕುವೆಂಪು ಅಧ್ಯಯನ ಕೇಂದ್ರ.